ರಾಜ್ಯ ಮಾನ್ಯ ಶಾಸಕರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಮನ್ನಣೆ ಮಾಡುತ್ತೇವೆ ಗಿರಿಜನರಿಗೆ ಆದಂತಹ ತೊಂದರೆಯನ್ನೂ ಕೂಡ ನಾವು ತಪ್ಪಿಸುತ್ತೇವೆ. ಈ ವಿಚಾರದಲ್ಲಿ ತಾವು ರಚನಾತ್ಮಕವಾದಂತಹ ಸಲಹೆಗಳು ಇದ್ದರೆ ಅದರ ಬಗೆ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಅದರ ಮೂಲಕ ಅವರ ಸಂಕಷ್ಟಗಳನ್ನು ಪರಿಹಾರ ಮಾಡುತ್ತಾರೆ

ಸಭಾಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಆಸನಕ್ಕೆ ಹಿಂದುರಗಬೇಕು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ

(ಇ) ವಿಷಯ ಉತ್ತರ ಕರ್ನಾಟಕದ ಭಾಗದಲ್ಲಿ ಹೃದ್ರೋಗ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ

†ಶ್ರೀ ಜೆ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಬಾವಿಯಲ್ಲಿ ಕುಳಿತಿದ್ದಾರೆ ಅವರ ಬೇಡಿಕೆ ಸರ್ಕಾರ ಈಡೇರಿಸಬೇಕು ಏಕೆಂದರೆ ಸುಮಾರು ವರ್ಷಗಳಿಂದ ಇದೆ ಅದರ ಜೊತೆಗೆದ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಹೇಲುವುದೇನೆಂದರೆ ಹೈಕೋರ್ಟ್ ಪೀರ ಉತ್ತರ ಕರ್ನಾಟಕದಲ್ಲಿ ಎಷ್ಟು ಮುಖ್ಯ ಇದೆಯೋ ಹಾಗೆ ಹೃದ್ರೋಗ ಆಸ್ಪತ್ರೆ ಆ ಭಾಗದಲ್ಲಿಬೇಕಾಗಿದ್ದು ಸರ್ಕಾರ ಅಲ್ಲಿ ಸ್ಥಾಪನೆ ಮಾಡಬೇಕು ಏಕೆಂದರೆ ಹೈಕೋರ್ಟ್ ಕೇಸ್ ಬೇಕಾದರೆ ಒಂದು ವಾರ ನಿಧಾನವಾದರೂ ಪರವಾಗಿಲ್ಲ ಆದರೆ ಹೃದ್ರೋಗಿಗಳು ನಿಮಿಷದಲ್ಲಿ ಸಾಯುತ್ತಾರೆ ಅಂತಹ ವ್ಯವಸ್ಥೆ ಇವತ್ತು ಉತ್ತರ ಕರ್ನಾಟಕದಲ್ಲಿ ಇಲ್ಲ ಇಡೀ ಉತ್ತರ ಕರ್ನಾಟಕ, ಹೈಕೋರ್ಟ್ ಕರ್ನಾಟಕ ಮತ್ತು ಬಂಬೆ ಕರ್ನಾಟಕ ಪ್ರದೇಶದಲ್ಲಿ ಕಾರ್ಡಿಯಾಲಜಿ ಸ್ಪೆಷಲೈನೇಷನ್ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸರ್ಕಾರದವರು ಸ್ಥಾಪನೆ ಮಾಡಿದರೆ ಅದು ಬಹಳ ಉಪಯೋಗವಾಗುತ್ತದೆ ಅದಕ್ಕೆ ಸರ್ಕಾರ ಕೂಡ ಇದನ್ನು ಪರಿಗಣನೆ ಮಾಡತಕ್ಕಂಥ ಅವಶ್ಯಕತೆ ಇದೆ ಏಕೆಂದರೆ ಬಡ ರೋಗಿಗಳು ಬೆಂಗಳೂರಿಗೆ ಬರುವುದಕ್ಕೆ ಕಷ್ಟವಾಗುತ್ತದೆ ಆ ಕಡೆಯ ಬಡ ರೋಗಿಗಳು ಬೆಂಗಳೂರಿಗೆ ಬಂದು, ಜಯದೇವ ಇನ್ಸಿಟ್ಯೂಟ್ ನಲ್ಲಿ ನೋಡಿಸಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ, ಇದು ಬಹಳ ಮುಖ್ಯವಾದಂತಹ ಅಂಶವಾಗಿದೆ, ಇದನ್ನು ಸಹ ಸರ್ಕಾರವೂ ಪರಿಗಣಿಸಬೇಕು, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬಂದರೆ ಒಳ್ಳೆಯದೆಂದು, ನಾಣೂ ಸಹ ಅವರಲ್ಲಿ ಮನವಿಯನ್ನು ಮಾಡುತ್ತೇನೆ

(ಈ) ವಿಷಯ ಗುಲ್ಬರ್ಗ ಜಿಲ್ಲೆಯಲ್ಲಿ ಆನೆಕಾಲು ರೋಗ ದಾಖಲಾಗಿರುವ ಬಗ್ಗೆ

ಶ್ರೀ ಎಂ ವೈ. ಪಾಟೀಲ್ (ಅಫ್ಜಲ್‌ಪುರ್) ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ " ಆನೆಕಾಲು ರೋಗ ಬಹಳ ಇದೆ, 4,680 ಕೇಸ್ ರಿಜಿಸ್ಟರ್ ಆಗಿ ಬೆಳಕಿದೆ ಬಂದಿದೆ, ಇನ್ನು ಆಸ್ಪತ್ರೆಗೆ ಬರದೇ ಇರುವಂತಹ ಇನ್ನು ಬಹಳಷ್ಟು ಕೇಸ್‌ಗಳು ಇವೆ, ಈ ವಿಚಾರವಾಗಿ ಸರ್ಕಾರವೂ ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳ ಬೇಕು, ಮತ್ತು ಈ ರೋಗ ಹೆಚ್ಚಿಗೆ ಹರಡದಂತೆ ನೋಡಿಕೊಳ್ಳಬೇಕು ಮತ್ತೆ ಅಫಜಲ್‌ಪುರ್ ತಾಲ್ಲೂಕ್‌ನಲ್ಲಿ ಒಂದು ಡೆತ್ ಆಗಿದೆ, ಚಿಂಚೋಳಿಯಲ್ಲಿ ಒಂದು ಡೆತ್ ಆಗಿದೆ, ಮತ್ತೆ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಈ ಬಗ್ಗೆ ಉದಾಹರಣೆಗಾಗಿ ಹೇಳುವುದಾದರೆ, ಅ ಫಜಲ್‌ಪುರ ತಾಲ್ಲೂಕಿನಲ್ಲಿ ಎರಡು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಸಿಬ್ಬಂದಿಗಳು ಇಲ್ಲ, ಕಡಚಿಗಿ ಮತ್ತು ಉಡಚಾಣದಲ್ಲಿ ಡಾಕ್ಟರ್‌ಗಳು ಇಲ್ಲ ಸಿಬ್ಬಂದಿಗಳು ಇಲ್ಲ, ಈ ರೀತಿಯಾದರೆ ಆಸ್ಪತ್ರೆಗಳು ಇದ್ದು, ಏನು ಪ್ರಯೋಜನ? ಆದುದರಿಂದ ಸರ್ಕಾರ ಈ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು, ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳತ್ತೇನೆ